# ಹೇಳಿಕೆ ಮಾತು ಬಿಟ್ಟು ಪ್ರೀತಿ ಕಲಿತ ಶಿಕ್ಷಕ



**ಧನುಷ್ ಕೆ.**

**ಉದಯದ 'ಶಾಂಭವಿ' ಅಶೋಕ**

◆ **ನಟನೆಯನ್ನು ಕಲಿತಿದ್ದು ಹೇಗೆ?**

ಹುಟ್ಟಿ ಬೆಳೆದಿದ್ದು ಬೆಂಗಳೂರಿನಲ್ಲಿ. ಐಟಿಐ ಓದಿದ್ದೇನೆ. ನಾನು 8ನೇ ತರಗತಿ ಓದುವಾಗ ಪೇಪರ್ ನೋಡಿ ನಟನಾಗಬೇಕು ಎಂದು ಕನಸು ಕಂಡಿದ್ದೆ. ಪೇಪರ್ ನೋಡುವ ಅವಕಾಶ ಬಂದಿದ್ದು ನನ್ನ ಪಾಲಿಗೆ ವಿಶೇಷವೇ ಸರಿ. ನನಗಾಗ 13 ವರ್ಷ. ದಿನವೂ ಮನೆ ಮನೆಗೆ ಪೇಪರ್ ಹಾಕುವುದು ನನ್ನ ಕಾಯಕ. ಆಗ ಬೇರೆ ಬೇರೆ ಪೇಪರ್‌ಗಳನ್ನು ತೆಗೆದು ನೋಡುತ್ತಿದ್ದೆ. ಅಲ್ಲಿ ಬರುತ್ತಿದ್ದ ಸೆಲೆಬ್ರಿಟಿಗಳ ಫೋಟೊ ಬರಹಗಳನ್ನು ಕಂಡು ನಾನೂ ಹೀಗೆ ಪತ್ರಿಕೆಯಲ್ಲಿ ಕಾಣಿಸಿಕೊಳ್ಳಬೇಕು ಎಂದು ಆಸೆ ಪಡುತ್ತಿದ್ದೆ. ಹಾಗೆಯೇ ಎರಡು ವರ್ಷ ಪತ್ರಿಕೆಗಳನ್ನು ಹಂಚುವ ಕೆಲಸ ಮಾಡಿದೆ. ನನ್ನ ಆಸೆಯನ್ನು ಈಡೇರಿಸಿಕೊಳ್ಳುವ ಮಾರ್ಗ ಮಾತ್ರ ಗೊತ್ತಿರಲಿಲ್ಲ. ಯಾರೋ ಹೇಳಿದರು ಎಂದು ನಾನು ಕೂಡಿಟ್ಟ ಹಣವನ್ನು ಕೊಟ್ಟು ನಟನಾ ತರಗತಿಗೆ ಸೇರಿದೆ. ಅದೂ ಅಷ್ಟು ಪ್ರಯೋಜನ ಆಗಲಿಲ್ಲ. ಆದರೆ ಆಡಿಷನ್ ಮೂಲಕ ಆಯ್ಕೆ ಮಾಡುತ್ತಾರೆ ಎನ್ನುವ ಮಾಹಿತಿ ಗೊತ್ತಾಯಿತು. ನಿರಂತರ ಆಡಿಷನ್ ನೀಡುತ್ತಾ 2016ರಿಂದ ಸಣ್ಣ ಪುಟ್ಟ ಪಾತ್ರಗಳನ್ನು ಮಾಡುತ್ತಿದ್ದೆ. 'ನಯನತಾರಾ'ದಲ್ಲಿ ಮುಖ್ಯ ಪಾತ್ರವನ್ನು ನಿರ್ವಹಿಸಿದೆ. ನಂತರ ಕೌಟುಂಬಿಕ ತೊಂದರೆಯಿಂದ ಸ್ವಲ್ಪ ದಿನ ಬ್ರೇಕ್ ತೆಗೆದುಕೊಂಡು ಪುನರ್ ಪ್ರವೇಶ ಮಾಡಿದ್ದೇನೆ. ಕಲಿಯಬೇಕು ಎನ್ನುವ ಬಯಕೆಯಿಂದ ಕಲಿಯುತ್ತಾ ನಟನಾಗಿದ್ದೇನೆ.

◆ **ಆಡಿಷನ್ ಅನುಭವ ಹೇಗಿತ್ತು?**

ಆಡಿಷನ್ ನಡೀತಿದೆ ಎಂದ ತಕ್ಷಣ ಫೋನ್ ಮಾಡಿ, ಬಿಎಂಟಿಸಿ ಬಸ್ ಹತ್ತುವುದೇ ಆಗಿನ ಕೆಲಸವಾಗಿತ್ತು. ಆಡಿಷನ್ ಸ್ಥಳದ ಲೊಕೇಶನ್ ಕಳಿಸುವುದು ಅವರ ಪದ್ಧತಿ. ನನ್ನ ಹತ್ತಿರ ಕೀಪ್ಯಾಡ್ ಫೋನ್ ಇತ್ತು. ಬಿಡದೆ ಫೋನಿನಲ್ಲಿಯೇ ಕಾಡಿ ಬೇಡಿ ಆ ಜಾಗ ತಲುಪುತ್ತಿದ್ದೆ. ಬೈಕ್ ಇರಲಿಲ್ಲ, ನಡೆದುಕೊಂಡು ಹೋಗುವುದು ಅನಿವಾರ್ಯವಾಗುತ್ತಿತ್ತು. ಹೀಗೆ ಒಂದೆರಡಲ್ಲ, ಸುಮಾರು ನೂರೈವತ್ತು ಆಡಿಷನ್ ನೀಡಿದ್ದೇನೆ. ಪ್ರತಿ ಪ್ರಯತ್ನವೂ ಒಳ್ಳೆಯ ಅನುಭವವನ್ನು ನೀಡಿದೆ. ನಟನೆಯ ತರಗತಿಯಲ್ಲಿ ಕಲಿತಿದ್ದೇ ಬೇರೆ. ಪ್ರಾಕ್ಟಿಕಲ್ ಕಲಿಕೆಯೇ ಬೇರೆ. ಸಣ್ಣ ಪುಟ್ಟ ಅವಕಾಶಗಳ ಮೂಲಕವೇ ನಟನೆ ಕಲಿಯಲು ಸಾಧ್ಯ ಎನ್ನುವ ಸತ್ಯದ ಅರಿವಾಯಿತು.

◆ **ಮುಂದಿನ ಯೋಜನೆ ಬಗ್ಗೆ ಏನು ಹೇಳುತ್ತೀರಿ?**

ನನ್ನದೇ ಆದ ಸ್ಥಾನವನ್ನು ಸಿನಿಮಾರಂಗದಲ್ಲಿ ಗಳಿಸಬೇಕು ಎನ್ನುವುದು ದೊಡ್ಡ ಆಸೆ. ಬಣ್ಣದ ಜಗತ್ತೇ ಗೊತ್ತಿಲ್ಲದ ನಾನು ಸಣ್ಣಪುಟ್ಟ ಪಾತ್ರದ ಮೂಲಕ ಲೀಡ್ ಪಾತ್ರಗಳನ್ನು ಮಾಡುತ್ತಿದ್ದೇನೆ. ಇದರಿಂದ ನನಗೆ ಒಂದು ಐಡೆಂಟಿಟಿ ಕೂಡ ಸಿಕ್ಕಿದೆ. ಅಲ್ಲಲ್ಲಿ ಜನ ಗುರುತಿಸುತ್ತಿದ್ದಾರೆ. ಕೆಲವರು ಸೆಲ್ಫಿ ತೆಗೆದುಕೊಳ್ಳುತ್ತಾರೆ. ಇದೆಲ್ಲ ತುಂಬ ಸಂತೋಷ ಕೊಡುತ್ತದೆ. ನನ್ನ ಪ್ರಯತ್ನದ ಬಗ್ಗೆ ಸಾರ್ಥಕ ಭಾವ ಮೂಡುತ್ತದೆ. ಯಾವುದೇ ಪಾತ್ರ ಆದರೂ ನಾನು ಮಾಡಲು ಸಿದ್ಧ. ಲವ್ ಬಾಯ್ ಆದರೂ ಸರಿ. ಮಾಸ್ ಆಧಾರಿತ ಕಥೆಯಾದರೂ ಸರಿ. ಯಾವುದೇ ಪಾತ್ರಕ್ಕೂ ಜೀವ ತುಂಬಬೇಕು. ಅದುವೇ ನಟನ ಬಹುಮುಖ್ಯ ಸವಾಲು. ಪಾಸಿಟಿವ್ ಆಗಿಯೇ ಇರಬೇಕು ಎಂದು ಅಂದುಕೊಂಡಿದ್ದೇನೆ. ಏನೇ ಆದರೂ ನಿರ್ದೇಶಕರು ನಟನನ್ನು ರೂಪಿಸುತ್ತಾರೆ.

◆ **ಅಶೋಕ ಪಾತ್ರ ಹೇಗಿದೆ?**

ಖಾಸಗಿ ಶಾಲೆಯ ಶಿಕ್ಷಕನ ಪಾತ್ರ. ಆರಂಭದಲ್ಲಿ ನೆಗೆಟಿವ್ ಇದ್ದ ಪಾತ್ರ ಸಕಾರಾತ್ಮಕ ವ್ಯಕ್ತಿತ್ವವನ್ನು ಪಡೆಯುತ್ತದೆ. ಆತ ಕೆಲಸ ಮಾಡುವ ಶಾಲೆಯ ವ್ಯವಸ್ಥಾಪಕರ ಕುಟುಂಬದ ಶಿವಗಾಮಿನಿಯನ್ನು ಪ್ರೀತಿ ಮಾಡುತ್ತಾನೆ. ಆಸ್ತಿಗಾಗಿ ಮದುವೆ ಕೂಡ ಆಗುತ್ತಾನೆ. ಕ್ರಮೇಣ ಅವನಿಗೆ ಪ್ರೀತಿಯ ಅರಿವು ಆಗುತ್ತದೆ. ಅದುವರೆಗೆ ತನ್ನ ಕುಟುಂಬದವರು ಹೇಳಿಕೊಟ್ಟ ಮಾತನ್ನು ಕೇಳುತ್ತಿರುತ್ತಾನೆ. ಕ್ರಮೇಣ ತನ್ನ ದುರಾಸೆಯನ್ನು ಬಿಟ್ಟು ಪ್ರೀತಿಸುವುದನ್ನು ಕಲಿಯುತ್ತಾನೆ.

◆ **ನಿಮ್ಮ ಹಾಗೆ ನಟನಾಗಬೇಕು ಎನ್ನುವವರಿಗೆ ನಿಮ್ಮ ಸಲಹೆ ಏನು?**

ಸೈಕಲ್ ಹೊಡೆಯಲು ಗಟ್ಟಿಯಾಗಬೇಕು. ನಿರಂತರ ಪ್ರಯತ್ನ ಮಾಡಬೇಕು. ಸೋಲು ಖಚಿತ ಆದರೂ ಗೆಲುವು ಅಷ್ಟೇ ನಿಶ್ಚಿತ. ಇವತ್ತೇ ಮಾಡಿ ಇವತ್ತೇ ಗೆಲ್ಲುತ್ತೇವೆ ಎನ್ನುವ ಭ್ರಮೆ ಇರಬಾರದು. ಇವತ್ತಿನ ಸೋಲು ಮುಂದೆ ಒಂದು ದಿನ ಸಹಾಯಕ್ಕೆ ಬರುತ್ತದೆ ಎನ್ನುವುದನ್ನು ಮರೆಯಬಾರದು. ಸೋಲುತ್ತಾ ಸಾಗುವ ಹಾದಿಯಲ್ಲಿ ಅದು ಕಲಿಸುವ ಪಾಠಗಳೇ ಗೆಲುವಿನತ್ತ ಕರೆದುಕೊಂಡು ಹೋಗುತ್ತದೆ. ಆರಂಭದಲ್ಲಿಯೇ ಅಂತಹ ಪಾಠ ಕಲಿಯಲು ಅಣಿಯಾಗಬೇಕು. ಆದರೆ ನಮ್ಮ ಗುರಿಯ ಬಗ್ಗೆ ಬಲವಾದ ವಿಶ್ವಾಸ ಇಟ್ಟುಕೊಂಡಿರಬೇಕು. ಅದನ್ನು ಮುಟ್ಟುತ್ತೇನೆ ಎಂಬ ಬಲವಾದ ನಂಬಿಕೆಯಿಂದ ಪ್ರಯತ್ನ ಮಾಡಬೇಕು. ನಮ್ಮ ಪ್ರಾಮಾಣಿಕ ಶ್ರಮಕ್ಕೆ ಫಲ ಸಿಕ್ಕೇ ಸಿಗುತ್ತದೆ. ಆಗಲೇ ಅವನ ಶಕ್ತಿ ಅವನಿಗೆ ಗೊತ್ತಾಗುತ್ತದೆ. ಒಂದಲ್ಲ ಒಂದು ದಿನ ಯಶಸ್ಸು ಖಂಡಿತ ಸಿಗುತ್ತದೆ. ಎಂಬ ವಿಶ್ವಾಸ ಇದ್ದರೆ ಅದೇ ನಮ್ಮ ಪ್ರಯತ್ನಕ್ಕೆ ಪ್ರೇರಣೆ ನೀಡುತ್ತದೆ ಎನ್ನುವುದು ನನ್ನ ನಂಬಿಕೆ.

■ **ರಾಘವೇಂದ್ರ ಕೆ.**